ದಯಮಾಡಿ ಮುಖ್ಯಮಂತ್ರಿಗಳು ಜಸ್ಟೀಸ್ ಜಗನ್ನಾಥ್‌ರವರ ಆಯೋಗ ಏನು ಇದೆ ಆ ಆಯೋಗದ ಒಂದು ಮಧ್ಯಂತರ ಆದೇಶ ಏನು ಇದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಮಧ್ಯಂತರ ವರದಿ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಆಯೋಗ ಕೊಟ್ಟಿರತಕ್ಕಂಥ ವರದಿಯನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಈ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸಲಪೇಕ್ಷಿಸುತ್ತೇನೆ.

ಆಳಂದ ತಾಲ್ಲೂಕಿನ ಭುಸನೂರ್ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಹಣ ನೀಡದೇ ಇರುವ ಬಗ್ಗೆ

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಅಧ್ಯಕ್ಷರೆ, ಆಳಂದ್ ತಾಲ್ಲೂಕಿನಲ್ಲಿ ಭೂಸನೂರ್ ಎನ್ನುವ ಶುಗರ್ ಫ್ಯಾಕ್ಟರಿ ಇದೆ. ಆ ಕಾರ್ಖಾನೆಯ ವತಿಯಿಂದ ಅಲ್ಲಿನ ರೈತರಿಗೆ 1994-95ನೇ ಸಾಲಿನ ದುಡ್ಡನ್ನು ಇಲ್ಲಿಯವರೆಗೆ ಕೊಟ್ಟಿಲ್ಲ. ಅಲ್ಲಿನ ರೈತರು ಅದರಿಂದಾಗಿ ಬಹಳ ಕಂಗಾಲಾಗಿದ್ದಾರೆ. ನಾನು ಅಲ್ಲಿಗೆ ಹೋದರೆ ಕ್ಷೇತ್ರದ ಜನರೆಲ್ಲಾ ನೀವು ಏತಕ್ಕೆ ಶಾಸಕರಾಗಿದ್ದೀರಿ ? ನಮ್ಮ ದುಡ್ಡು ಏತಕ್ಕೆ ಕೊಡಿಸುತ್ತಿಲ್ಲ, ಜನತಾ ದಳದ ಸರ್ಕಾರ ಎಂದರೆ ರೈತರ ಸರ್ಕಾರ ಎಂದು ಕರೆಯುತ್ತಾರೆ ನೀವು ಅವರಿಗೆ ಕೇಳಬೇಕು, ನೀವು ನಮ್ಮೊಂದಿಗೆ ಧ್ವನಿಗೂಡಿಸಬೇಕು, ಅವರಿಗೆ ಜಾಗ್ರತೆ ಮಾಡಬೇಕು ಎಂದು ನನ್ನನ್ನು ಘೇರಾವ್ ಮಾಡುತ್ತಿದ್ದಾರೆ. ಸರ್ಕಾರದವರು ಸದರಿ ಸಕ್ಕರೆ ಕಾರ್ಖಾನೆಗೆ ಸದಸ್ಯರನ್ನು ಕೂಡ ನಾಮಿನೇಟ್ ಮಾಡಿದ್ದಾರೆ. ಬಹಳ ನೊಂದ ಮನಸ್ಸಿನಿಂದ ಹೇಳುವ ವಿಚಾರ ಎಂದರೆ ಅವರು ಏನಾದರೂ ವಿವರವನ್ನು ಕೇಳಿದರೆ ಕೊಡುತ್ತಿಲ್ಲ. ಹೋದ ಸಾರಿ ಕೇಳಿದಾಗ ಮಾತ್ರ ಒಂದೇ ಒಂದು ಉತ್ತರವನ್ನು ಈ ಸದನದಲ್ಲಿ ಒದಗಿಸಿದ್ದರು. ಅಲ್ಲಿ ನಡೆಯತಕ್ಕಂಥ ವಿಷಯಗಳಲ್ಲಿ ನಾನು ಒಂದು ವಿಷಯವನ್ನು ನೆನಪು ಇಟ್ಟುಕೊಂಡಿದ್ದೇನೆ. ಅದು ಏನೆಂದರೆ ಅಲ್ಲಿನ ನಾಮಿನೇಟೆಡ್ ಮೆಂಬರ್ಸ್ ಐವತ್ತು ಸಾವಿರ ಗೋಣಿ ಚೀಲಗಳನ್ನು ಖರೀದಿ ಮಾಡಿದ್ದಾರೆ. ಒಂದೊಂದು ಚೀಲಕ್ಕೆ 31.75ಪೈಸೆ ಧಾರಣೆಯನ್ನು ತೋರಿಸಿದ್ದಾರೆ. ಆದರೆ ಆ ಗೋಣಿಚೀಲದ ಕಿಮ್ಮತ್ತು ಇಪ್ಪತ್ತು ರೂಪಾಯಿಗಿಂತ ಹೆಚ್ಚಿಗೆ ಇರುವುದಿಲ್ಲ. ಆ ಐವತ್ತು ಸಾವಿರ ಚೀಲದ ಖರೀದಿಯಲ್ಲಿ ಕನಿಷ್ಟ ಆರುಲಕ್ಷ ರೂಪಾಯಿಗಳ ವ್ಯವಹಾರ ಆಗಿದೆ. ಅದೇ ತರಹ ಎಲ್ಲವನ್ನೂ ಖರೀದಿ ಮಾಡಿ ಆ ಫ್ಯಾಕ್ಟರಿಯಲ್ಲಿ ಎಲ್ಲವನ್ನೂ ಲೂಟಿ ಮಾಡುತ್ತಿದ್ದಾರೆ. ಅಲ್ಲಿನ ರೈತರ ಬಗ್ಗೆ ಅವರಿಗೆ ಸ್ವಲ್ಪ ಕೂಡ ಕಳಕಳಿ ಇಲ್ಲ. ನಾನು ಹೊಸದಾಗಿ ಶಾಸಕನಾಗಿದ್ದೇನೆ. ಈ ಹಿಂದೆ ಶ್ರೀ ಗೋವಿಂದ ಪಿ. ಒಡೆಯರಾಜ್‌ರವರು ಹದಿನೈದು ವರ್ಷಗಳ ಕಾಲ ಶಾಸಕರಾಗಿದ್ದರು, ಅವರು ಆ ಶುಗರ್ ಫ್ಯಾಕ್ಟರಿಯ ಸದಸ್ಯರಾಗಿದ್ದರು. ಆ ನಂತರ ಶ್ರೀ ಜಿ. ರಾಮಕೃಷ್ಣರವರು ಶಾಸಕರಾಗಿದ್ದರು, ಸಚಿವರಾಗಿದ್ದರು ಅವರೂ ಕೂಡ ಅದಕ್ಕೆ ಹತ್ತು ವರ್ಷ ಸದಸ್ಯರಾಗಿದ್ದರು. ಇವೊತ್ತು ನಾನು ಆ ಕ್ಷೇತ್ರದ ಶಾಸಕನಿದ್ದೂ ಕೂಡ ಆ ಸಕ್ಕರೆ ಕಾರ್ಖಾನೆಯ ಸದಸ್ಯನಿಲ್ಲ. ನೀವು ಸದಸ್ಯರಿಲ್ಲ, ನಿಮ್ಮನ್ನು ಮೀಟಿಂಗ್‌ಗೆ ಕರೆಯುವುದಿಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ನಾನು ಸದಸ್ಯನಿದ್ದರೆ ಅಲ್ಲಿ ನಡೆಯುವ ಲೋಪದೋಷಗಳನ್ನು ಪರಿಹಾರ ಮಾಡಲಿಕ್ಕೆ ನಾನು ಪ್ರಯತ್ನ ಮಾಡಬಹುದು. ರೈತರ ಪರವಾಗಿ ರೈತರಿಗೆ ಬೇಕಾದ ನ್ಯಾಯವನ್ನು ಕೇಳುತ್ತೇನೆ. ಈಗ ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ

ಮಾಡಿಕೊಳ್ಳುವುದೇನೆಂದರೆ ನೀವು ರೈತರ ದುಡ್ಡನ್ನು ಕೊಡುತ್ತೀರೋ ಇಲ್ಲವೋ ಎಂದು ಖಡಾಖಂಡಿತವಾಗಿ ಹೇಳಿ. ನೀವು ಕೊಡುವುದಿಲ್ಲ ಎಂದರೆ ನಾನು ನನ್ನ ಕ್ಷೇತ್ರದ ರೈತರಿಗೆ ತಿಳಿಸುತ್ತೇನೆ. ಸರ್ಕಾರದವರು ಅಲ್ಲನ ರೈತರಿಗೆ ಅವರಿಗೆ ಸಿಗಬೇಕಾದ ದುಡ್ಡನ್ನು ಕೊಟ್ಟು ಒಳ್ಳೆಯ ಹೆಸರು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಕೂಡಲೇ ಡೈರೆಕ್ಟರ್ ಆಫ್ ಶುಗರ್ಸ್‌ರವರನ್ನು ಒಂದು ಸಭೆಯನ್ನು ಕರೆಯಲಿಕ್ಕೆ ಏರ್ಪಾಡು ಮಾಡುತ್ತೇನೆ. ಮತ್ತು ಸಕ್ಕರೆ ಸಚಿವರ ಜೊತೆ ಎಲ್ಲಾ ರೈತರನ್ನು, ಕಾರ್ಖಾನೆಯ ಆಡಳಿತ ವರ್ಗದವರನ್ನು ಮತ್ತು ಶಾಸಕರನ್ನೂ ಕೂಡ ಕರೆದು ಒಂದು ಮೀಟಿಂಗ್ ಮಾಡುತ್ತೇವೆ. ಮತ್ತು ರೈತರಿಗೆ ಕೊಡಬೇಕಾದ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ. ಅದರ ಜೊತೆಗೆ ತಾವು ಸದಸ್ಯರಾಗುವ ವಿಚಾರವನ್ನು ಏನು ಹೇಳಿದ್ದೀರಿ ಅದೂ ಕೂಡ ನಿಜ. ಅದು ಶಾಸಕರಿಗೆ ಕೊಡಬೇಕಾದ ಗೌರವ ಅದರ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಿಂಟಿಂಗ್ ಪ್ರೆಸ್‌ಅನ್ನು ಕೈಗಾರಿಕೆ ಎಂದು ಪರಿಗಣಿಸಿ ಸಬ್ಸಿಡಿ ನೀಡುವ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಅನೇಕ ಪದವೀಧರರು ಉದ್ಯೋಗ ಸಿಗದಿದ್ದರೂ ಕೂಡ ಸ್ವಯಂ ಉದ್ಯೋಗ ಮಾಡಿ ಬದುಕ ಬೇಕೆಂದು ಪ್ರಿಂಟಿಂಗ್ ಪ್ರೆಸ್ ಹಾಕಿದ್ದಾರೆ. ಅನೇಕ ಪ್ರಿಂಟಿಂಗ್ ಪ್ರೆಸ್ ಹಾಕಿರತಕ್ಕಂಥ ಜನ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ಸಹಾಯಧನವನ್ನು ಯಾಚನೆ ಮಾಡಿ ಅರ್ಜಿಯನ್ನು ಕೊಟ್ಟಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆ ಅರ್ಜಿಯನ್ನು ತೆಗೆದುಕೊಳ್ಳುತ್ತಿಲ್ಲ. ಪ್ರಿಂಟಿಂಗ್ ಪ್ರೆಸ್ ಇಂಡಸ್ಟ್ರೀಸ್‌ನಲ್ಲಿ ಸೇರುವುದಿಲ್ಲ ಆದಕಾರಣ ಅದಕ್ಕೆ ಸಬ್ಸಿಡಿ ಬರುವುದಿಲ್ಲ ಎಂದು ಅರ್ಜಿಯನ್ನು ತಿರಸ್ಕಾರ ಮಾಡುತ್ತಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಈ ಪ್ರಿಂಟಿಂಗ್ ಪ್ರೆಸ್ ಮಾಲೀಕರಿಗೂ ಕೂಡ ಸಹಾಯಧನ ವಿಸ್ತರಣೆ ಮಾಡಿ ಅವರಿಗೆ ಸಿಗುವಂತೆ ಮಾಡಬೇಕು. ಮತ್ತು ಪ್ರಿಂಟಿಂಗ್ ಪ್ರೆಸ್‌ಗಳನ್ನು ಕೂಡ ಇಂಡಸ್ಟ್ರೀಸ್ ಎಂದು ಪರಿಗಣಿಸಬೇಕು. ಇವೊತ್ತು ನೀವು ಹೋಟೆಲ್‌ಗಳಿಗೂ ಕೂಡ ಸಹಾಯಧನವನ್ನು ಕೊಡುತ್ತೀರಿ. ಆದಕಾರಣ ಈ ಒಂದು ಪ್ರಿಂಟಿಂಗ್ ಪ್ರೆಸ್‌ನವರಿಗೂ ವಿಸ್ತರಣೆ ಮಾಡಿ ಸೇವೆ ಸಲ್ಲಿಸತಕ್ಕಂಥ ಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನನಗೂ ಕೂಡ ಅನೇಕ ಮನವಿಗಳು ಬಂದಿವೆ. ಈ ಮುದ್ರಕರಲ್ಲಿ ಎರಡು ವಿಧವಾದ ಮುದ್ರಕರು ಇದ್ದಾರೆ. ಒಂದು ಬ್ಲಾಕ್ ಪ್ರಿಂಟಿಂಗ್ ಪ್ರೆಸ್‌ನವರು ಇನ್ನೊಂದು ಮುದ್ರಕರು ಮತ್ತು ಪ್ರಕಾಶಕರು. ಇವರನ್ನು ಮ್ಯಾನುಫ್ಯಾಕ್ಚರರ್ಸ್ ಎಂದು ತೆಗೆದುಕೊಂಡು ಕನ್ಸಿಷನ್ ಕೊಡುತ್ತಿದ್ದೇವೆ. ಆದರೆ ಯಾರು ಮುದ್ರಕರಿದ್ದಾರೆ ಅವರಿಗೆ ಇದು ಸಿಗುತ್ತಿಲ್ಲ. ಏಕೆಂದರೆ ನಾವು ಸೇಲ್ಸ್ ಆಕ್ಟ್‌ನಲ್ಲಿ ಇನ್‌ಸೆಂಟೀವ್ಸ್ ಅಂಡ್ ಕನ್ಸಿಷನ್ ಪ್ಯಾರಾ 2(7)ನಲ್ಲಿ ಡಿಫೈನ್ಡ್ ಮಾಡಿದ ಪ್ರಕಾರ ಇವರು ಬರುವುದಿಲ್ಲ. ಅಲ್ಲಿ ನ್ಯೂನ್ಯತೆ ಇದೆ. ಆ ಪ್ಯಾರಾವನ್ನು ಕೈಬಿಡಬೇಕೆಂದು ಈಗಾಗಲೇ ನಾನು ಸ್ಟೇಟ್ ಲೆವಲ್ ಕಮಿಟೀಗೆ ಸೂಚನೆಯನ್ನು